**ಪಿ.ಡಬ್ಲ್ಯೂ-1**

**ದಿನಾಂಕಃ 11-06-2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು ಶ್ರೀ ಕೆ.ಎ.ಆರ್. ವಕೀಲರಿಂದಃ-**

ನನಗೆ ದಾವಾಸ್ತಿಗಳ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಗೊತ್ತಿದೆ. ದಾವಾ ಐಟಂ ನಂ.1 ಗದಗ್ ತಾಲ್ಲೂಕಿನಲ್ಲಿದೆ ಎಂದರೆ ಸರಿ. ಸದರಿ ಆಸ್ತಿಗೆ ಸಂಬಂಧಿಸಿದಂತೆ ನಿಪಿ-1 ಮತ್ತು 4 ನ್ನು ಹಾಜರುಪಡಿಸಿರುತ್ತೇನೆ. ಸದರಿ ಆಸ್ತಿಗೆ ಸಂಬಂಧಿಸಿದಂತೆ ಆರ್.ಒ.ಆರ್. ಮತ್ತು ಇಂಡೆಕ್ಸ್ ಆಫ್ ಲ್ಯಾಂಡ್ ನ್ನು ಹಾಜರುಪಡಿಸುತ್ತೇನೆ. ಸಾಕ್ಷಿಗೆ ಸದರಿ ಆಸ್ತಿಗೆ ಸಂಬಂಧಿಸಿದಂತೆ 4 ಪಹಣಿ ಪತ್ರಿಕೆಗಳನ್ನು ತೋರಿಸಲಾಗಿ ಅವುಗಳನ್ನು ಒಪ್ಪಿಕೊಂಡಿದ್ದರಿಂದ ಅವುಗಳನ್ನು ನಿಡಿ-1 ರಿಂದ 4 ಎಂದು ಗುರುತಿಸಲಾಯಿತು. ಅದೇ ರೀತಿ ಸದರಿ ಆಸ್ತಿಯ ಫಾರಂ ನಂ. 6 ನ್ನು ತೋರಿಸಲಾಗಿ ಅದನ್ನು ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ-5 ಎಂದು ಗುರುತಿಸಲಾಯಿತು. ನಿಡಿ-5 ರಲ್ಲಿ ಮರೀಗೌಡ ಎಂದು ನಮೂದಿಸಿದ್ದು ಅವರು ನನ್ನ ಮುತ್ತಜ್ಜ. ಸದರಿಯವರ ಮಗನ ಹೆಸರು ಭರಮನಗೌಡ. ಭರಮನಗೌಡನ ಮಗನ ಹೆಸರು ನಿಂಗನಗೌಡ. ನನ್ನ ಮುತ್ತಜ್ಜ ಮರೀಗೌಡ ಸದರಿ ಆಸ್ತಿಯನ್ನು ಖರೀದಿಸಿದ್ದು ಅದು ಅವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ಮರೀಗೌಡ 1968 ರಲ್ಲಿ ವಿಲ್ ಮೂಲಕ ಸದರಿ ಆಸ್ತಿಯನ್ನು ಭರಮನಗೌಡನಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಗೆ ಸಂಬಂಧಿಸಿದ ವರದಿಯನ್ನು ಸಾಕ್ಷಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ-6 ಎಂದು ಗುರುತಿಸಲಾಯಿತು. ದಿಃ05-10-1972 ರಲ್ಲಿ ಭರಮನಗೌಡ ಇವರು ನಮ್ಮ ತಂದೆ ನಿಂಗನಗೌಡರಿಗೆ ಸದರಿ ಆಸ್ತಿಯನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸಾಕ್ಷಿ solvency certificate ಮೂಲಕ ಬಿಟ್ಟುಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ಸದರಿ ತಾರೀಖಿನಲ್ಲಿ ನಾನಾಗಲೀ 1 ಮತ್ತು 2 ನೇ ಪ್ರತಿವಾದಿಯಾಗಲೀ ಜನಿಸಿರಲಿಲ್ಲ ಎಂದರೆ ಸರಿ. ಆ ಸಮಯದಲ್ಲಿ ನನ್ನ ತಾಯಿ 3 ನೇ ಪ್ರತಿವಾದಿಯ ಮದುವೆ ನಮ್ಮ ತಂದೆಯ ಜೊತೆ ಆಗಿರಲಿಲ್ಲ ಎಂದರೆ ಸರಿ. ಆ ಕಾರಣದಿಂದ ಐಟಂ ನಂ.1 ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ.

ನನ್ನ ತಂದೆ ಕಾಟನ್ ಕಾರ್ಪೋರೇಶನ್ ಆಫ್ ಇಂಡಿಯಾ ದಲ್ಲಿ ಕೆಲಸ ಮಾಡಿ ನಿವೃತ್ತಿ ಹೊಂದಿರುತ್ತಾರೆ. ನನ್ನ ತಂದೆ ಹಲವಾರು ಊರುಗಳಲ್ಲಿ ಸೇವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ನಾವು ಮತ್ತು ನಮ್ಮ ತಂದೆ ಕದಡಿ ಗ್ರಾಮಕ್ಕೆ ಹೋಗಿ ಬಂದು ಮಾಡುತ್ತಿದ್ದೆವು. ರಜೆಯಲ್ಲಿ ಹೋಗಿ ಬಂದು ಮಾಡುತ್ತಿದ್ದೆವು ಅಲ್ಲಿಯೇ ವಾಸವಿದ್ದ ಬಗ್ಗೆ ಯಾವುದೇ ದಾಖಲೆಗಳು ಇಲ್ಲ. ನಮ್ಮ ತಂದೆ ಆ ಜಮೀನನ್ನು ಪಾಲಿಗೆ ಕೊಟ್ಟ

ಬಗ್ಗೆ ಯಾವುದೇ ದಾಖಲೆ ಇಲ್ಲ. ನಮ್ಮ ತಂದೆ ಆ ರೀತಿ ಪಾಲಿಗೆ ಕೊಟ್ಟು ಯಾವ ಯಾವ ವರ್ಷದಂದು ಎಷ್ಟು ಹಣ ಪಡೆದಿರುತ್ತಾರೆಂದು ದಾಖಲೆ ಇಲ್ಲ. ನನಗೆ ಆ ಬಗ್ಗೆ ಮಾಹಿತಿ ನಾನು ಹೈಸ್ಕೂಲಿನಲ್ಲಿದ್ದಾಗ ತಿಳಿಯಿತು. ನಮ್ಮ ತಂದೆ ಆ ರೀತಿ ಪಾಲಿಗೆ 3-4 ವರ್ಷಗಳವರೆಗೆ ಒಬ್ಬರಿಗೆ ಕೊಟ್ಟಿದ್ದು ನಂತರ ಬೇರೆ ರೈತರಿಗೆ ಪಾಲಿಗೆ ಕೊಡುತ್ತಿದ್ದರು. ಐಟಂ ನಂ.1 ನ್ನು ಬಿಟ್ಟರೆ ಆ ಊರಿನಲ್ಲಿ ನಮ್ಮ ತಂದೆಗೆ ಬೇರೆ ಆಸ್ತಿಗಳು ಇರಲಿಲ್ಲ. ನಮ್ಮ ತಂದೆ 20 ವರ್ಷಗಳ ಕಾಲ ಸರ್ಕಾರಿ ನೌಕರರಾಗಿ ಸೇವೆ ಸಲ್ಲಿಸಿರುತ್ತಾರೆ. ಐಟಂ ನಂ.1 ರಿಂದ ಇಷ್ಟು ಆದಾಯ ಬರುತ್ತಿತ್ತು ಎಂದು ನಮ್ಮ ತಂದೆ ಅವರ ಇಲಾಖೆಗೆ ಪ್ರತಿವರ್ಷ ಮಾಹಿತಿಯನ್ನು ಕೊಡುತ್ತಿದ್ದರು. ಆ ಬಗ್ಗೆ ನನ್ನ ಬಳಿ ನನ್ನ ತಂದೆ ಹೇಳಿರಲಿಲ್ಲ. ಸದರಿ ಆಸ್ತಿಯಿಂದ ನಮ್ಮ ತಂದೆಗೆ ಎಷ್ಟು ಆದಾಯ ಬರುತ್ತಿತ್ತು ಎಂದು ತೋರಿಸಲು ಯಾವುದೇ ದಾಖಲೆಗಳು ಇಲ್ಲ ಆ ಕಾರಣದಿಂದ ಹಾಜರುಪಡಿಸಿಲ್ಲ. ನಮ್ಮ ತಂದೆ ಹೇಳಿದ್ದರಿಂದ ಆ ಆಸ್ತಿಯಿಂದ ಆದಾಯ ಬರುತ್ತಿತ್ತು ಎಂದು ಹೇಳಬಹುದೇ ಹೊರತು ಯಾವುದೇ ದಾಖಲೆಗಳು ಇಲ್ಲ. 1974 ರ ನಂತರ ಯಾವುದೇ ಜಮೀನನ್ನು ಪಾಲಿಗೆ ಕೊಡುವಂತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್ ಕುಮಾರ್ ಡಿ. ವಡಿಗೇರಿ )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ. **11-06-2025.**